KACN320024282018

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಕೊಳ್ಳೇಗಾಲ.</u>**

**<u>ದಿನಾಂಕಃ 28ನೇ ಜನವರಿ 2026</u>**

<u>ಉಪಸ್ಥಿತರು</u>

ಶ್ರೀಮತಿ. ಕಾವ್ಯಶ್ರೀ ಎಂ.
ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ.

**<u>ಓ.ಎಸ್. ಸಂಖ್ಯೆಃ 220-2018</u>**

**ವಾದಿಗಳು** : ಶ್ರೀ ಆರ್ ಮಹದೇವಯ್ಯ ಮತ್ತು ಇತರರು

(ಪ್ರತಿನಿಧಿಸುವವರುಃ ಶ್ರೀ ಎಸ್.ಆರ್.ಎ., ವಕೀಲರು)

**ವಿರುದ್ದ**

**ಪ್ರತಿವಾದಿಗಳು** : ಶ್ರೀ ಮಹದೇವಪ್ಪ ಮತ್ತು ಇತರರು

(ಪ್ರತಿನಿಧಿಸುವವರುಃ ಶ್ರೀ ಪಿ.ಹೆಚ್.ಕೆ ., ಮತ್ತು ಪಿ.ಎಸ್., ವಕೀಲರು)

**-:<u>ಮಧ್ಯಂತರ ಅರ್ಜಿ ಸಂಖ್ಯೆ 20</u> :-**

ಅರ್ಜಿದಾರರು : ಶ್ರೀಮತಿ ರಾಜೇಶ್ವರಿ ಮತ್ತು ಇತರರು

......... ಪ್ರಸ್ತಾವಿತ ಪ್ರತಿವಾದಿಗಳು

**ವಿರುದ್ದ**

ಎದುರುದಾರರು : ಆರ್ ಮಹದೇವಯ್ಯ ಮತ್ತು ಇತರರು

**........** ವಾದಿಗಳು

| | | |
|---|---|---|
| i | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ 1 ನಿಯಮ 10 |
| ii | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ಪ್ರಸ್ತಾಪಿತ ಪ್ರತಿವಾದಿಯನ್ನು ಸೇರ್ಪಡೆಗೊಳಿಸಲು ಕೋರಿ |
| iii | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | 22.03.2024 |
| iv | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ 20 |
| v | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | 03.08.2024 |
| vi | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | 28.01.2026 |

**-: ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 20 ಮೇಲಿನ ಆದೇಶ :-**

ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 20ನ್ನು ದಾಖಲು ಮಾಡಿ ಅರ್ಜಿಯಲ್ಲಿ ಕೋರಿಕೊಂಡಿರುವಂತೆ ಈ ಅರ್ಜಿದಾರರನ್ನು ಈ ದಾವೆಯ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡುವಂತೆ ಕೋರಿಕೊಂಡಿರುತ್ತಾರೆ.

2. ಅರ್ಜಿದಾರರು ತಮ್ಮ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣಪತ್ರಿಕೆಯಲ್ಲಿ ಶಿವಲಿಂಗಪ್ಪರವರು 2ನೇ ಅರ್ಜಿದಾರರ ತಾತ ಆಗಿರುತ್ತಾರೆ. ಸರ್ವೆ ನಂಬರ್ 97/ಎ1 ವಿಸ್ತೀರ್ಣ 2.99 ಸೆಂಟ್ ಕೊಳ್ಳೇಗಾಲ ತಾಲ್ಲೂಕು, ಮುಡಿಗುಂಡ ಗ್ರಾಮಕ್ಕೆ ಸೇರಿದ ಸ್ವತ್ತು ಮೂಲತಃ ಶಿವಲಿಂಗಪ್ಪನವರಿಗೆ ಸೇರಿದ್ದಾಗಿರುತ್ತದೆ. ಸದರಿ ಸರ್ವೇ ನಂಬರ್ 97/ಎ1 ರ ವಿಸ್ತೀರ್ಣ 2 ಎಕರೆ 99 ಸೆಂಟ್ ಪೈಕಿ 1 ಎಕರೆ ಸ್ವತ್ತನ್ನು ರಂಗಯ್ಯ ಬಿನ್ ಕೇತಯ್ಯರವರಿಗೆ ಭೂ ನ್ಯಾಯ ಮಂಡಳಿಯು ಮಂಜೂರು ಮಾಡಿರುತ್ತದೆ. ಸದರಿ 2 ಎಕರೆ 99 ಸೆಂಟ್ ವಿಸ್ತೀರ್ಣದ ಸರ್ವೆ ನಂಬರ್‌ನಲ್ಲಿ ರಂಗಯ್ಯ ಬಿನ್ ಕೇತಯ್ಯರವರು 1 ಎಕರೆ ಮತ್ತು ಎಸ್. ಶಿವಸ್ವಾಮಿ ರವರಿಗೆ

14 ಕುಂಟೆ ಜಮೀನನ್ನು ಭೂನ್ಯಾಯ ಮಂಡಳಿಯಿಂದ ಮಂಜೂರು ಮಾಡಿದ್ದು, ಉಳಿದ 1 ಎಕರೆ 85 ಸೆಂಟ್ ಅರ್ಜಿದಾರರ ತಾತ ಶಿವಲಿಂಗಪ್ಪ ಅವರ ಹೆಸರಿನಲ್ಲಿ ಇರುತ್ತದೆ. ಮುಂದುವರೆದು ಭೂ ನ್ಯಾಯ ಮಂಡಳಿಯ ತೀರ್ಪಿನ ನಂತರ ಸದರಿ ಸರ್ವೆ ನಂಬರ್‌ನ ಪಶ್ಚಿಮ ಭಾಗದಲ್ಲಿ 85 ಸೆಂಟ್ ಅರ್ಜಿದಾರರ ತಾತನ ಹೆಸರಿಗೆ, ಉಳಿದ 2 ಎಕರೆಯಲ್ಲಿ ರಂಗಯ್ಯರವರಿಗೆ ಉತ್ತರ ಭಾಗದಲ್ಲಿ 1 ಎಕರೆ, ಉಳಿದ ದಕ್ಷಿಣ ಭಾಗದ 1 ಎಕರೆ ಸ್ವತ್ತು ಅರ್ಜಿದಾರರ ತಾತ ಶಿವಲಿಂಗಪ್ಪರವರಿಗೆ ಸೇರಿದ್ದಾಗಿರುತ್ತದೆ. ಅರ್ಜಿದಾರರ ತಾತ ಶಿವಲಿಂಗಪ್ಪರವರು 1996ರಲ್ಲಿ ಮರಣ ಹೊಂದಿದ್ದು, ಅವರ ನಂತರ ಅವರ ಏಕೈಕ ಕಾನೂನುಬದ್ಧ ವಾರಸುದಾರರಾದ ಎಸ್. ಶಿವಮೂರ್ತಿರವರು ದಾವಾ ಸರ್ವೆ ನಂಬರ್ 97/ಎ1 ರ ವಿಸ್ತೀರ್ಣ 1 ಎಕರೆ 85 ಸೆಂಟ್ ಸ್ವತ್ತನ್ನು ಪಿತ್ರಾರ್ಜಿತವಾಗಿ ಪಡೆದುಕೊಂಡು ಸ್ವಾದೀನಾನುಭವದಲ್ಲಿ ಇರುತ್ತಾರೆ. ಆನಂತರ 2000ನೇ ಸಾಲಿನಲ್ಲಿ ಅರ್ಜಿದಾರರ ತಂದೆ ಮರಣ ಹೊಂದಿದ್ದು, ಅವರ ನಂತರ ಅರ್ಜಿದಾರರುಗಳು ಕಾನೂನುಬದ್ಧ ವಾರಸುದಾರರಾಗಿ ಸ್ವತ್ತಿನ ಸ್ವಾಧಿನ ಅನುಭವದಲ್ಲಿ ಇರುತ್ತಾರೆ. ಅರ್ಜಿದಾರರ ತಂದೆಯು ಮರಣ ಹೊಂದಿದ ನಂತರ, ಒಂದನೇ ಅರ್ಜಿದಾರರು ತಾತನ ಹೆಸರಿನಿಂದ ಜಮೀನನ್ನು ಎಂ ಆರ್ ಹೆಚ್ 33/2016 ರಂತೆ ತಮ್ಮ ತಾಯಿ ರಾಜೇಶ್ವರಿಯವರು ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡು ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಅರ್ಜಿದಾರರುಗಳು ದಾವಾ ಅನುಸೂಚಿತ ಸ್ವತ್ತಿನ ಮಾಲೀಕರಾಗಿದ್ದು, ಸ್ವತ್ತಿನ ಸ್ವಾದೀನಾನುಭವದಲ್ಲಿ ಇರುತ್ತಾರೆ. ವಾದಿಗಳಿಗೆ ದಾವಾ "ಎ" ಮತ್ತು "ಬಿ" ಅನುಸೂಚಿತ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ. ವಾದಿಗಳು ದುರುದ್ದೇಶಪೂರಿತರಾಗಿ, ದಾವಾ ಅನುಸೂಚಿತ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ದಾವೆಯನ್ನು ದಾಖಲು ಮಾಡಿರುತ್ತಾರೆ. ಆದ್ದರಿಂದ, ಅರ್ಜಿದಾರರನ್ನು ಈ ದಾವೆಯ ಪ್ರತಿವಾದಿಯರನ್ನಾಗಿ ಸೇರ್ಪಡೆ ಮಾಡುವಂತೆ ಕೋರಿಕೊಂಡಿರುತ್ತಾರೆ.

3. ಮೇಲ್ಕಂಡ ಅರ್ಜಿಗೆ ವಾದಿಯರು ತಮ್ಮ ತಕರಾರನ್ನು ದಾಖಲು ಮಾಡಿದ್ದು ತಕರಾರಿನಲ್ಲಿ ಅರ್ಜಿ ಕಾನೂನಾತ್ಮಕವಾಗಲಿ ವಾಸ್ತಕವಿಕವಾಗಿ ಉರ್ಜಿತವಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಅರ್ಜಿದಾರರು ಸಲ್ಲಿಸಿರುವ ಕ್ರಮಾದೇಶ 1 ನಿಯಮ 10(2)ಲ್ಲಿನ ಮೂಲತತ್ವಗಳ ಅಡಿಯಲ್ಲಿ ಅರ್ಜಿಯು ಬರುವುದಿಲ್ಲ ಎಂಬುದಾಗಿ ಹಾಗಾಗಿ ಅರ್ಜಿಯನ್ನು ತಿರಸ್ಕರಿಸುವಂತೆ ಕೋರಿಕೊಂಡಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ಲಗತ್ತು ಪ್ರಮಾಣ ಪತ್ರಿಕೆಯಲ್ಲಿ ತಿಳಿಸಿರುವ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ವಾದಿಗಳು ದಾವಾ "ಬಿ" ಅನುಸೂಚಿತ ಸ್ವತಿಗೆ ಮಾತ್ರ ಮಾಲೀಕತ್ವ ಮತ್ತು ಶಾಶ್ವತ ನಿರ್ಭಂದಕಾಜ್ಞೇ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ ದಾವಾ "ಬಿ" ಅನ್ನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಅರ್ಜಿದಾರರು ಯಾವುದೇ ರೀತಿಯಾದ ಹಕ್ಕು ಅಧಿಕಾರ ಹೊಂದಿರುವುದಿಲ್ಲ. ಮುಂದುವರೆದು ದಾವಾ ಅನುಸೂಚಿತ ಸ್ವತ್ತಿಗೆ

ಸಂಬಂಧಿಸಿದಂತೆ ಅರ್ಜಿದಾರರು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವುದಿಲ್ಲ ಹಾಗಾಗಿ ಅರ್ಜಿದಾರರು ಸಲ್ಲಿಸಿರುವ ಮಧ್ಯಕಾಲೀನ ಅರ್ಜಿಯು ಕಾನೂನಿನ ಅಡಿಯಲ್ಲಿ ಉರ್ಜಿತವಾಗಿರುವುದಿಲ್ಲ ಈ ದಾವೆಯಲ್ಲಿ ಅರ್ಜಿದಾರರು ಅವಶ್ಯಕ ಪಕ್ಷಗಾರನಾಗಿರುವುದಿಲ್ಲ ಹಾಗೂ ಯಾವ ರೀತಿ ಅರ್ಜಿದಾರರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರು ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಯನ್ನು ಮತ್ತು ವಿವರಣೆಯನ್ನು ನೀಡಿರುವುದಿಲ್ಲ. ಹಾಗಾಗಿ ಸದರಿ ಅರ್ಜಿಯು ಕಾನೂನಿನ ಅಡಿಯಲ್ಲಿ ಉರ್ಜಿತವಾಗಿರುವುದಿಲ್ಲ. ಅರ್ಜಿದಾರರು ಈ ದಾವೆಯ ಪ್ರತಿವಾದಿಗಳ ಜೊತೆ ಸೇರಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಹಾಗೂ ವಾದಿಗೆ ಕಿರುಕುಳವನ್ನು ನೀಡುವ ಉದ್ದೇಶದಿಂದ ಈ ಮೇಲ್ಕಂಡ ಮಧ್ಯಕಾಲೀನ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಅರ್ಜಿದಾರರಿಗೆ ದಾವಾ ಅನಸೂಚಿತ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇದ್ದಲ್ಲಿ ಪ್ರತ್ಯೇಕ ದಾವೆಯನ್ನು ದಾಖಲು ಮಾಡಿ ತಮ್ಮ ಹಕ್ಕುಗಳನ್ನು ನಿರ್ಧಾರ ಮಾಡಿಕೊಳ್ಳಬೇಕಾಗುತ್ತದೆ. ಈ ದಾವೆಯಲ್ಲಿ ಅವರ ಯಾವುದೇ ಹಕ್ಕುಗಳು ನಿರ್ಧಾರವಾಗುವುದಿಲ್ಲ ಹಾಗಾಗಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಪಡಿಸಬೇಕಾಗಿ ಕೋರಿಕೊಂಡಿದ್ದಾರೆ.

4. ಉಭಯ ಪಕ್ಷಗಾರ ವಾದವನ್ನು ಆಲಿಸಲಾಯಿತು. ಮೇಲ್ಕಂಡ ಅರ್ಜಿಯನ್ನು ತಿರ್ಮಾನಿಸುವಲ್ಲಿ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶ ಉದ್ಭವಿಸಿರುತ್ತದೆ.

1. ಅರ್ಜಿದಾರರು ಸಲ್ಲಿಸಿರುವ ಅರ್ಜಿ ಸಂಖ್ಯೆ 20 ಯನ್ನು ಮನ್ನಿಸಿ ಅರ್ಜಿದಾರರನ್ನು ಹಾಗೂ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾಪಿತ ಪ್ರತಿವಾದಿಯರು ದಾವೆಯನ್ನು ತೀರ್ಮಾನ ಮಾಡಲು ಅವಶ್ಯಕ ಪಕ್ಷಗಾರರಾಗಿರುತ್ತಾರೆ ಎಂಬುದನ್ನು ರುಜುವಾತು ಪಡಿಸಿರುವರೇ?

2. ಯಾವ ಆದೇಶ?

5. ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ 1:- ನಕಾರಾತ್ಮಕವಾಗಿ.

ಅಂಶ 2:- ಈ ಕೆಳ ಕಂಡ ಆದೇಶದಂತೆ

**<u>ಕಾರಣಗಳು</u>**

6. **<u>ಅಂಶ 1:-</u>** ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿರುವ ಸಂಭಾವನೀಯ ಪ್ರತಿವಾದಿಯರನ್ನು ಪ್ರತಿವಾದಿಗಳಾಗಿ ಸೇರ್ಪಡೆ ಮಾಡಲು ಅನುಮತಿ ಕೋರಿಕೊಂಡಿರುತ್ತಾರೆ.

7. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ವಾದಿಯು ಸರ್ವೆ ನಂಬರ್ 97/ಎ1 ರ ವಿಸ್ತೀರ್ಣ 1 ಎಕರೆಗೆ ಸಂಬಂಧಿಸಿದಂತೆ ದಾವೆಯನ್ನು ದಾಖಲು ಮಾಡಿ ಹಕ್ಕುಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿಕೊಂಡಿರುತ್ತಾರೆ. ಸದರಿ ದಾವೆಯು ವಾದವನ್ನು ಮಂಡಿಸುವ ಹಂತದಲ್ಲಿ ಈ ಮೇಲೆ ಕಂಡ ಅರ್ಜಿಯನ್ನು ದಾಖಲು ಮಾಡಿ ಈ ದಾವೆಯಲ್ಲಿನ ವಸ್ತು ವಿಷಯವನ್ನು ಪರಿಣಾಮಕಾರಿಯಾಗಿ ತೀರ್ಮಾನ ಮಾಡುವ ನಿಟ್ಟಿನಲ್ಲಿ ಅರ್ಜಿದಾರರು ಅವಶ್ಯಕ ಪಕ್ಷಗಾರರು ಆಗಿರುತ್ತಾರೆ. ಹಾಗಾಗಿ ತಮ್ಮನ್ನು ಪ್ರತಿವಾದಿಯರನ್ನಾಗಿ ಸೇರ್ಪಡೆ ಮಾಡಿಕೊಳ್ಳುವಂತೆ ಕೋರಿ ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಮೇಲ್ಕಂಡ ದಾವೆಗೆ ವಾದಿಯು ತನ್ನ ತಕರಾರನ್ನು ದಾಖಲು ಮಾಡಿದ್ದು ಪ್ರತಿವಾದಿಗಳು ಯಾವ ರೀತಿ ಈ ದಾವೆಯ ವಸ್ತು ವಿಷಯವನ್ನು ಪರಿಣಾಮಕಾರಿಯಾಗಿ ತೀರ್ಮಾನ ಮಾಡುವಲ್ಲಿ ಸಹಾಯಕಾರಿಯಾಗಿರುತ್ತಾರೆ ಎಂಬುದನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿರುವುದಿಲ್ಲ ಹಾಗೂ ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಸದರಿ ಈ ದಾವೆಯ ಪ್ರತಿಯವಾದಿಯರನ್ನಾಗಿ ಸೇರ್ಪಡೆ ಮಾಡದಂತೆ ಹಾಗೂ ಸದರಿಯವರು ಸಲ್ಲಿಸಿರುವ ಅರ್ಜಿಗಳನ್ನು ವಜಾಗೊಳಿಸುವಂತೆ ಕೋರಿಕೊಂಡಿರುತ್ತಾರೆ.

8. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1ನಿಯಮ 10ರಲ್ಲಿ ಯಾವುದೇ ಪಕ್ಷಗಾರರನ್ನು ದಾವೆಯಲ್ಲಿ ಸೇರ್ಪಡೆ ಅಥವಾ ತೆಗೆದು ಹಾಕಬಹುದಾಗಿರುತ್ತದೆ. ಆ ರೀತಿಯಾಗಿ ಯಾವುದೇ ಪಕ್ಷಗಾರರನ್ನು ಸೇರ್ಪಡೆ ಮಾಡುವ ಸಂದರ್ಭದಲ್ಲಿ ಸದರಿ ಪಕ್ಷಗಾರರು, ದಾವೆಯಲ್ಲಿನ ವಿವಾದಾಂಶವನ್ನು ಪರಿಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ಧರಿಸುವಂತಿರಬೇಕು. ಆಗ ಮಾತ್ರ ಪಕ್ಷಗಾರರನ್ನು ಸೇರ್ಪಡೆ ಮಾಡಬೇಕೆಂದು ತಿಳಿಸುತ್ತದೆ. ಅಥವಾ ನ್ಯಾಯಾಲಯವು ಸಂಧರ್ಭೋಚಿತವಾಗಿ, ಹಾಗೂ ವಿವೇಚನೆಯಿಂದ ಸದರಿ ಪಕ್ಷಗಾರರ ಸೇರ್ಪಡೆಯು ನ್ಯಾಯೋಚಿತವಾದದ್ದು ಎಂದು ಕಂಡು ಬಂದರೇ, ಪಕ್ಷಗಾರರ ಸೇರ್ಪಡೆ ಆದೇಶಿಸಬಹುದೆಂದು ತಿಳಿಸುತ್ತದೆ.

9. ವಾದಿಯ ವಾದಪತ್ರವನ್ನು ಪರಿಶೀಲಿಸಲಾಗಿ ವಾದಿಯು ಕೊಳ್ಳೇಗಾಲ ತಾಲ್ಲೂಕು, ಮುಡಿಗುಂಡ ಗ್ರಾಮದ ಸರ್ವೆ ನಂಬರ್ 97/ಎ1 ರ ವಿಸ್ತೀರ್ಣ 1 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ದಾವೆಯನ್ನು ದಾಖಲು ಮಾಡಿರುವುದು ಕಂಡುಬರುತ್ತಿದೆ. ಅರ್ಜಿದಾರರು ಅರ್ಜಿಯ ಲಗತ್ತು ಪ್ರಮಾಣ ಪತ್ರಿಕೆಯಲ್ಲಿನ ಸಂಗತಿಗಳನ್ನು ಪರಿಶೀಲಿಸಿದಾಗ, ವಾದಿಯರ ಪೂರ್ವಜರಾದ ರಂಗಯ್ಯರವರಿಗೆ ಸರ್ವೆ ನಂಬರು 97/ಎ1 ರ ವಿಸ್ತೀರ್ಣ 1 ಎಕರೆ ಸ್ವತನ್ನು ಭೂ ನ್ಯಾಯ ಮಂಡಳಿ ಮಂಜೂರು ಮಾಡಿರುವುದನ್ನು ಒಪ್ಪಿರುತ್ತಾರೆ. ಅದರಂತೆ ದಾವಾ ಅನುಸೂಚಿತ ಸ್ವತ್ತು ಮೂಲತಃ ರಂಗಯ್ಯರವರಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂಬುದು ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತಿದೆ ಹಾಗೂ ಆ ಬಗ್ಗೆ ಅರ್ಜಿದಾರರು ಸಹ ತಮ್ಮ ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಮುಂದುವರಿದು ಅರ್ಜಿದಾರರು ಭೂ ನ್ಯಾಯ ಮಂಡಳಿಯು ರಂಗಯ್ಯರವರಿಗೆ 1 ಎಕರೆ ಸ್ವತ್ತನ್ನು ಮಂಜೂರು ಮಾಡಿದ ನಂತರ ಅರ್ಜಿದಾರರ ತಾತ ಶಿವಲಿಂಗಪ್ಪರವರಿಗೆ ಒಟ್ಟು 1 ಎಕರೆ 85 ಸೆಂಟ್ ಸ್ವತ್ತು ಉಳಿದುಕೊಂಡಿದ್ದು, ಸರ್ವೆ ನಂಬರ್ 97/ಎ1 ಉತ್ತರ ಭಾಗದಲ್ಲಿ ರಂಗಯ್ಯರವರೆಗೂ ದಕ್ಷಿಣ ಭಾಗದಲ್ಲಿ ತನ್ನ ತಾತ ಶಿವಲಿಂಗಪ್ಪರವರಿಗೂ ಸೇರಿದ ಸ್ವತ್ತುಗಳು ಬಂದಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ. ಆ ರೀತಿಯಾಗಿ ರಂಗಯ್ಯರವರಿಗೆ ಉತ್ತರ ಭಾಗದಲ್ಲಿ ದಕ್ಷಿಣ ಭಾಗದಲ್ಲಿ ಸ್ವತ್ತುಗಳು ಬಂದಿರುತ್ತವೆ ಎಂಬುದಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ನ್ಯಾಯಾಲಯದ ಸಮಕ್ಷಮ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಮುಂದುವರಿದು ಶಿವಲಿಂಗಪ್ಪರವರು ಸದರಿ 1 ಎಕರೆಯ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ದಕ್ಷಿಣ ಭಾಗದ ಸೊತ್ತಿನಲ್ಲಿ ಅವರು ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂಬುದಕ್ಕೆ ಸಂಬಂಧಿಸಿದಂತೆ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡುಬರುವ ಯಾವುದೇ ಸಂಗತಿಗಳನ್ನು ನಂಬುವಂತಹ ದಾಖಲಾತಿಗಳನ್ನು ಅರ್ಜಿದಾರರು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವುದಿಲ್ಲ.

10. ಅರ್ಜಿದಾರರು ತಮ್ಮ ಅರ್ಜಿಯ ಜೊತೆಯಲ್ಲಿ ಲಗತ್ತಿಸಿರುವ ಪ್ರಮಾಣಪತ್ರಿಕೆಯಲ್ಲಿ ಸರ್ವೆ ನಂಬರ್ 97/ಎ1 ರ ವಿಸ್ತೀರ್ಣ 1 ಎಕರೆ 85 ಸೆಂಟ್ ಅರ್ಜಿದಾರವರ ತಾತ ಶಿವಲಿಂಗಪ್ಪನವರಿಗೆ ಸೇರಿದ್ದು, ಅದು ಅದರಲ್ಲಿ 1 ಎಕರೆಯ ಸ್ವತ್ತು ದಕ್ಷಿಣ ಭಾಗದಲ್ಲಿ ಬಂದಿರುತ್ತದೆ ಎಂಬುದನ್ನು ಮೇಲ್ನೋಟಕ್ಕೆ ನಂಬುವಂತಹ ಯಾವುದೇ ದಾಖಲಾತಿಗಳನ್ನು ಅರ್ಜಿದಾರರು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವುದಿಲ್ಲ. ಅರ್ಜಿದಾರರು ಸರ್ವೆ ನಂಬರ್ 97/ಎ1 ವಿಸ್ತೀರ್ಣ 1 ಎಕರೆ 85 ಸೆಂಟ್ ಸ್ವತ್ತು ಅರ್ಜಿದಾರರ ತಾತ ಶಿವಲಿಂಗಪ್ಪರವರಿಗೆ ಸೇರಿತ್ತು, ಆನಂತರ ದಾವಾ ಅನುಸೂಚಿತ ಸ್ವತ್ತುಗಳನ್ನು ಅರ್ಜಿದಾರರು ಅನುಭವಿಸಿಕೊಂಡು ಬರುತ್ತಿರುತ್ತಾರೆ ಎಂಬುದಕ್ಕೆ ಸಂಭಂದಿಸಿದಂತೆ ಅರ್ಜಿದಾರರುಗಳು ಈ ನ್ಯಾಯಾಲಯದ ಸಮಕ್ಷಮ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಮುಂದುವರೆದು, ವಾದಿಯು ದಾವಾ ಅನಸೂಚಿತ "ಬಿ" ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಘೋಷಣೆ ಮತ್ತು

ಶಾಶ್ವತ ನಿರ್ಭಂದಕಾಜ್ಞೇಯನ್ನು ಕೋರಿ ದಾವೆಯನ್ನು ದಾಖಲುಮಾಡಿದ್ದು, ಸದರಿ ದಾವೆಯಲ್ಲಿನ ಸಂಗತಿಯನ್ನು ಪರಿಣಾಮಕಾರಿಯಾಗಿ ನಿರ್ಧರಿಸುವ ನಿಟ್ಟಿನಲ್ಲಿ ಅರ್ಜಿದಾರರು ಅವಶ್ಯಕ ಪಕ್ಷಗಾರರಾಗಿರುತ್ತಾರೆ ಎಂಬುದಾಗಿ ಕಂಡು ಬರುತ್ತಿಲ್ಲ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿಸಿರುವಂತೆ ರಂಗಯ್ಯರವರಿಗೆ ಸರ್ವೆ ನಂಬರ್ 97/ಎ1 ರ ವಿಸ್ತೀರ್ಣ 1 ಎಕರೆ ಸ್ವತ್ತು ಭೂ ನ್ಯಾಯಮಂಡಳಿಯಿಂದ ಮಂಜೂರಾದ ಸ್ವತ್ತಾಗಿರುತ್ತದೆ. ಹಾಗೂ ವಾದಿಗಳು ಸದರಿ ರಂಗಯ್ಯನವರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ 1 ಎಕರೆ ವಿಸ್ತೀರ್ಣದ ಸ್ವತ್ತಿಗೆ ಮಾತ್ರವೇ ದಾವೆಯನ್ನು ದಾಖಲು ಮಾಡಿರುತ್ತಾರೆ. ಹಾಗಾಗಿ ಈ ಹಂತದಲ್ಲಿ ಅರ್ಜಿದಾರರು ದಾವೆಯಲ್ಲಿನ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರ್ಣಯಿಸುವ ನಿಟ್ಟಿನಲ್ಲಿ ಅವಶ್ಯಕ ಪಕ್ಷಗಾರರು ಆಗಿರುತ್ತಾರೆ ಎಂಬುದು ಕಂಡುಬರುತ್ತಿಲ್ಲ. ಮುಂದುವರಿದು ಈ ದಾವೆಯಲ್ಲಿ ಅರ್ಜಿದಾರರ ಗೈರು ಹಾಜರಿಯಲ್ಲಿಯೂ ಸಹ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯು ದಾಖಲು ಮಾಡಿರುವ ದಾವೆಯನ್ನು ಪರಿಣಾಮಕಾರಿಯಾಗಿ ನಿರ್ಧರಿಸಬಹುದಾಗಿರುತ್ತದೆ. **ಹಾಗಾಗಿ ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

11. **<u>ಅಂಶ-2 :-</u>** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆ,

**ಆದೇಶ**

ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ XX ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10** ರಡಿಯಲ್ಲಿನ ಅರ್ಜಿಯನ್ನು ತಿರಸ್ಕರಿಸಲಾಗಿದೆ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ 28ನೇ ಜನವರಿ 2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

(ಕಾವ್ಯಶ್ರೀ ಎಂ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.

(ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**<u>ಆದೇಶ</u>**

ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ **XX** ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10** ರಡಿಯಲ್ಲಿನ ಅರ್ಜಿಯನ್ನು ತಿರಸ್ಕರಿಸಲಾಗಿದೆ**.**

**PCJ & JMFC., KOLLEGAL.**

For Argument by

PCJ & JMFC., Kollegal.